1) ಮೆ: ವಾಸವದತ್ತಾ ಸಿಮೆಂಟ್ಸ್:

ಮೇಲ್ಕಂಡ ಅಂಶಗಳಂತೆ ಘಟಕದವರು ತೆರಿಗೆ ಪಾವತಿಯನ್ನು ಮಾಡಿರುತ್ತಾರೆ. ಈವರೆಗೆ ಯಾವುದೂ ಬಾಕಿ ಇರುವುದಿಲ್ಲ.

2) ಮೆ: ರಾಜಶ್ರಿ ಸಿಮೆಂಟ್ಸ್:

ಒಪ್ಪಂದದ ಕರಾರಿನಂತೆ 2000-2001ರವರೆಗೆ ತೆರಿಗೆಯನ್ನು ಪಾವತಿಸಿರುತ್ತಾರೆ.

ಉ) ಉದ್ಭವಿಸುವುದಿಲ್ಲ.

ಪಿರಿಯಾಪಟ್ಟಣದಲ್ಲಿ ನಿರ್ಮಿಸಲಾಗಿರುವ ಅಂಬೇಡ್ಕರ್ ಭವನ ಉದ್ಘಾಟನೆ

582(987) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ನಗರದಲ್ಲಿ ನಿರ್ಮಿಸಿರುವ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಂಡಿದ್ದು ಯಾವಾಗ?

ಆ) ಈವರೆವಿಗೂ ಅಂಬೇಡ್ಕರ್ ಭವನದ ಉದ್ಘಾಟನೆ ಮಾಡದಿರಲು ಕಾರಣವೇನು?

ಇ) ಯಾವಾಗ ಉದ್ಘಾಟನೆ ಮಾಡಿ ಸಾರ್ವನಿಕ ಉಪಯೋಗಕ್ಕೆ ಬಿಡಲಾಗುವುದು?

ಈ) ಅಂಬೇಡ್ಕರ್ ಭವನಕ್ಕೆ ಕಾಂಪೌಂಡ್ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗಿದೆಯೇ?

ಉ) ಬಿಡುಗಡೆ ಮಾಡಿದ್ದಲ್ಲಿ ಕಾಮಗಾರಿಯು ಯಾವ ಹಂತದಲ್ಲಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ದಿನಾಂಕ: 22.3.2000ರಂದು ಪೂರ್ಣಗೊಂಡಿದೆ.

ಆ) ಹಾಲಿ ನಿರ್ಮಿಸಿರುವ ಭವನದ ಸುತ್ತ ಆವರಣ ಗೋಡೆಯನ್ನು ನಿರ್ಮಿಸದ ಹೊರತು ಭವನದ ಉದ್ಘಾಟನೆಯನ್ನು ಮಾಡದಿರಲು ಸ್ಥಳೀಯ ದಲಿತ ಸಂಘರ್ಷ ಸಮಿತಿಯುವರುತಾಲ್ಲೂಕು ಮಟ್ಟದ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಒತ್ತಾಯಿಸಿದ್ದರಿಂದ ಆವರಣ ಗೋಡೆ ನಿರ್ಮಿಸಿ ನಂತರ ಉಪಯೋಗಿಸಲು ತೀರ್ಮಾನಿಸಿದ್ದರಿಂದ ವಿಳಬಂವಾಗಿರುತ್ತದೆ.

ಇ) ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ, ಆವರಣ ಗೋಡೆ ಪೂರ್ಣಗೊಂಡ ನಂತರ ಸಾರ್ವಜನಿಕರ ಉಪಯೋಗಕ್ಕೆ ಬಿಡಲಾಗುವುದು.

ಈ) ಹೌದು. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರೂ 2.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಉ) ಪಿರಿಯಾಪಟ್ಟಣದಲ್ಲಿರುವ ಅಂಬೇಡ್ಕರ್ ಭವನದ ಆವರಣದಲ್ಲಿರುವ ಕಾಂಗ್ರೆಸ್ ಕಚೇರಿ ಮತ್ತು ಮಹಿಳಾ ಸಮಾಜ ಎರಡಕ್ಕೂ ಸಹ ತಿರುಗಾಡಲು ತೊಂದರೆಯಾಗದಂತೆ